# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ</u>

ಎಸ್‌ಸಿ ನಂ. 04/2021

ಸಿಡಬ್ಲು: 5 / ಪಿಡಬ್ಲು: 3

ದಿನಾಂಕ: 28.07.2023

**<u>ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ವೀರೇಶ ಸಾಲಿಮಠ |
| ತಂದೆ /ಗಂಡನ ಹೆಸರು | : | ಚನ್ನವೀರಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಕದಾಂಪೂರ ಗ್ರಾಮ |

## <u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:</u>

1. **ಈಗ ತೋರಿಸಿದ ಆರೋಪಿತರು ತೋರಿಸಿ ಹಾಜರುಪಡಿಸಿದ ಗುನ್ನೆಗೆ ಬಳಸಿದ ಮೋಟರ ಸೈಕಲ ಮತ್ತು ಆಯುಧಗಳ ಜಪ್ತ ಪಂಚನಾಮೆಯ ಮೇಲೆ ನನ್ನ ಸಹಿಗಳು ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-6(ಎ) ಎಂದು ಗುರುತಿಸಲಾಯಿತು.**

2. ಈಗ ಸುಮಾರು ಎರಡೂವರೆ ವರ್ಷಗಳ ಹಿಂದೆ, ಪೋಲೀಸರು ನನ್ನ ಮತ್ತು ಇತರರ ಸಹಿಗಳನ್ನು ಅತ್ತಿಕಟ್ಟಿಯ ಹೊಲದಲ್ಲಿ ಮಾಡಿಸಿಕೊಂಡಿರುತ್ತಾರೆ. ಆಗ ಪೋಲೀಸರು ಬಡಿಗೆ, ಕೊಡ್ಲಿ ಇವುಗಳನ್ನು ಅಮಾನತ್ತುಪಡಿಸಿಕೂಂಡಿರುತ್ತಾರೆ. ಹಾಗೆಯೇ ಅವುಗಳ ಜೊತೆ ಇನ್ನಿತರ ಸಾಮಾನುಗಳು ಕೂಡಾ ಇದ್ದವು, ಅವುಗಳು ಯಾವವು ಎಂದು ಈಗ ನನಗೆ ನೆನಪಿರುವುದಿಲ್ಲ.

3. ಸದರಿ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸದರಿ ಬಡಿಗೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿರುತ್ತದೆ. ಆಗ ಪೋಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. **ಈಗ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗ ನಿಪಿ-7 ರಿಂದ 10 ಎಂದು ಗುರುತಿಸಲಾಯಿತು.** ನಿಪಿ-7 ರಿಂದ 10 ರಲ್ಲಿ, 1 ಮತ್ತು 3 ನೇ ಆರೋಪಿಗಳ, ನನ್ನ ಭಾವಚಿತ್ರಗಳು ಇರುತ್ತವೆ. ಸದರಿ 1 ಮತ್ತು 3 ನೇ ಆರೋಪಿಗಳು ಈ ದಿನ ತೆರೆದ ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ.

4. ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಯೂ ಸಹ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಠಾಣೆಯಲ್ಲಿ ನಿಪಿ-4 ಮತ್ತು 5 ರಂತೆ ಎರಡು ಫೋಟೋಗಳನ್ನು ತೆಗೆದಿರುತ್ತಾರೆ. ನಿಪಿ-4 ಮತ್ತು 5 ರಲ್ಲಿ ನ್ಯಾಯಾಲಯದ ಮುಂದೆ ಹಾಜರ ಇರುವ 1 ನೇ ಆರೋಪಿಯ ಭಾವಚಿತ್ರ ಇರುತ್ತದೆ. ನಿಪಿ-4 ಮತ್ತು 5 ನ್ನು ತೆಗೆಯುವಾಗ ನಮ್ಮ ಮುಂದೆ ಬೈಕು ಇತ್ತು ಮತ್ತು ಅದು ಅವುಗಳಲ್ಲಿ ಕಂಡುಬರುತ್ತದೆ. ಬೈಕನ್ನು ಪೋಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಬೈಕನ್ನು ನೋಡಿದರೆ ಗುರುತಿಸುತ್ತೇನೆ.

5. ನಿಪಿ-6 ಪಂಚನಾಮೆಯನ್ನು ಮುಂಜಾನೆ 11.00 ರಿಂದ ಮದ್ಯಾಹ್ನ 03.00 ಗಂಟೆಯವರೆಗೆ ಮಾಡಲಾಗಿರುತ್ತದೆ. ನನ್ನ ಜೊತೆ ಇನ್ನೊಬ್ಬ ವ್ಯಕ್ತಿ ಕೂಡಾ ನಿಪಿ-6 ಕ್ಕೆ ಸಹಿ ಮಾಡಿರುತ್ತಾರೆ. ಆತನ ಹೆಸರು ಏನೆಂದು ನನಗೆ ಹೇಳಲು ಆಗುವುದಿಲ್ಲ. ಏಕೆಂದರೆ ಆತ ಬೂದಿಹಾಳ ಗ್ರಾಮದ ವ್ಯಕ್ತಿಯಾಗಿರುತ್ತಾನೆ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

## ಪಾಟಿ ಸವಾಲುಃ ಪಿಪಿಯವರಿಂದಃ

6. ದಿನಾಂಕಃ 08.03.2020 ರಂದು ನನ್ನನ್ನು ಹಾಗೂ ಚಾಸಾ-4 ರವರನ್ನು ಪೋಲೀಸರು ಮುಂಡರಗಿ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಠಾಣೆಯಲ್ಲಿ 1 ಮತ್ತು 3 ನೇ ಆರೋಪಿಗಳು ಇದ್ದರು ಎಂದರೆ ಸರಿ. ಆಗ ಪೋಲೀಸರು 1 ಮತ್ತು 3 ನೇ ಆರೋಪಿಗಳು ಎಲ್ಲಿಗೆ ಕರೆದುಕೊಂಡು ಹೋಗಿ ಏನನ್ನು ಹಾಜರಪಡಿಸುತ್ತಾರೋ ಅದನ್ನು ನೋಡಿ ಪಂಚನಾಮೆಯನ್ನು ಬರೆಸಿಕೊಡಬೇಕೆಂದು ಹೇಳಿದ್ದು ಅದಕ್ಕೆ ಒಪ್ಪಿಕೊಂಡೆವು ಎಂದರೆ ಸರಿ. ನಂತರ ಠಾಣೆಯ ಹೊರಗಡೆ ಹಿರೋ ಹೊಂಡಾ ಫ್ಯಾಷನ್ ಪ್ರೋ ನಂ. ಕೆಎ-26/ಆರ್-3832 ಇದ್ದು ಅದನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸಾಕ್ಷಿಯು ಮೊದಲು ಅತ್ತಿಕಟ್ಟಿ ಗ್ರಾಮಕ್ಕೆ ಕರೆದುಕೊಂಡು ಹೋಗಿ ಆ ನಂತರ ಅಲ್ಲಿಂದ ಬಂದು ಪೋಲೀಸರು ಮೋಟರ ಸೈಕಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ಮೋಟರ ಸೈಕಲ ಹತ್ತಿರ 1 ನೇ ಆರೋಪಿಯನ್ನು ನಿಲ್ಲಿಸಿ ನಿಪಿ-4 ಮತ್ತು 5 ರಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ.

7. ನಂತರ ಅತ್ತಿಕಟ್ಟಿ ಗ್ರಾಮಕ್ಕೆ ನಾನು, ಚಾಸಾ-4, 1 ಮತ್ತು 3 ನೇ ಆರೋಪಿಗಳು ಮತ್ತು ಪೋಲೀಸರು ಸೇರಿ ಜೀಪಿನಲ್ಲಿ ಹೋಗಿರುತ್ತೇವೆ ಎಂದರೆ ಸರಿ. ಅತ್ತಿಕಟ್ಟಿ ಗ್ರಾಮದಿಂದ ಕಬಲಾಯತಕಟ್ಟಿ ತಾಂಡಾಕ್ಕೆ ಹೋಗುವ ರಸ್ತೆಗೆ ಹೊಂದಿಕೊಂಡಿರುವ ಜಮೀನಿನ ಬದುವಿನ ಕಲ್ಲಿನ

ಕುಟ್ರಿಯಲ್ಲಿ ಇದ್ದ ಈಗ ತೋರಿಸುತ್ತಿರುವ ಮು.ಮಾ.4 ಒಂದು ಮಚ್ಚನ್ನು 1 ನೇ ಆರೋಪಿಯು ತೆಗೆದು ಹಾಜರಪಡಿಸಿರುತ್ತಾರೆ ಮತ್ತು 3 ನೇ ಆರೋಪಿಯು ಮು.ಮಾ.5 ಬಡಿಗೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ. ನಿಪಿ-6 ನ್ನು ಮುಂಜಾನೆ 09.30 ರಿಂದ 12.30 ರ ವರೆಗೆ ಪಂಚನಾಮೆ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಮುಂಜಾನೆ 10.00 ರಿಂದ 12.00 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಹೇಳಿರುತ್ತಾರೆ.

**<u>ಪಾಟಿ ಸವಾಲುಃ ಶ್ರೀ ಜಿ.ಪಿ. ಕೋಳಿವಾಡ, ಆರೋಪಿತರ ಪರ ವಕೀಲರಿಂದಃ</u>**

8. ನಾನು 8 ನೇ ತರಗತಿವರೆಗೆ ಓದಿರುತ್ತೇನೆ. ನಾನು ಒಕ್ಕಲುತನ ಮಾಡಿಕೊಂಡಿರುತ್ತೇನೆ. ನಾನು ಮುಂಡರಗಿ ಪೋಲೀಸ ಠಾಣೆಗೆ ಹೋಗುವುದು ಬರುವುದು ಮಾಡುತ್ತೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಗಂಡ - ಹೆಂಡತಿ ಜಗಳವಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ನಾನು ಪೋಲೀಸ ಠಾಣೆಗೆ ಹೋದಾಗ ಪೋಲೀಸರು ನನ್ನನ್ನು ಮಹಜರಿಗೆ ಕರೆದುಕೊಂಡು ಹೋಗಿರುತ್ತಾರೆ. ಮಹಜರಿಗೆ ಬರಬೇಕೆಂದು ಪೋಲೀಸರು ನನ್ನನ್ನು ಕರೆದಿರುತ್ತಾರೆ. ಆದರೆ ಪೋಲೀಸರು ನನಗೆ ನೋಟೀಸನ್ನು ಕೊಟ್ಟಿರಲಿಲ್ಲ. ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಫೋಟೋಗಳನ್ನು ತೆಗೆಯುವಾಗ, ಪೋಲೀಸರು ಕೈ ಮಾಡಿ ತೋರಿಸಬೇಕೆಂದು ಹೇಳಿದ್ದರಿಂದ ನಾನು ಕೈ ತೋರಿಸಿರುತ್ತೇನೆ.

9. ಮು.ಮಾ.5 ರಂತಹ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಪೋಲೀಸರು ನನ್ನನ್ನು ಕರೆದುಕೊಂಡು ಹೋದ ವಾರ ಯಾವುದು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಕರೆದುಕೊಂಡು ಹೋದ ಸ್ಥಳದ ಚೆಕ್ಕಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಆ ದಿನ 1 ಮತ್ತು 3 ನೇ ಆರೋಪಿಗಳು ಯಾವ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

**<u>ಮರು ವಿಚಾರಣೆ - ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

ಗದಗ

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 04/2021

ಸಿಡಬ್ಲ್ಯೂ: 6 / ಪಿಡಬ್ಲ್ಯೂ: 4

ದಿನಾಂಕ: 28.07.2023

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಗಂಗನಗೌಡ ಪಾಟೀಲ |
| ತಂದೆ /ಗಂಡನ ಹೆಸರು | : | ನಿಂಗನಗೌಡ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಅತ್ತಿಕಟ್ಟಿ ಗ್ರಾಮ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಪ್ರಾಸಾ-2 ಮತ್ತು ಚಾಸಾ-7, 8 ರವರು ನನ್ನ ಖಾಸ ತಮ್ಮಂದಿರುತ್ತಾರೆ. ಚಾಸಾ-9 ರವರು ಚಾಸಾ-7 ರವರ ಹೆಂಡತಿ ಇರುತ್ತಾಳೆ. ಚಾಸಾ-10 ರವರು ಪ್ರಾಸಾ-2 ರವರ ಹೆಂಡತಿ ಇರುತ್ತಾಳೆ. ಚಾಸಾ-11 ನನ್ನ ಹೆಂಡತಿ ಇರುತ್ತಾಳೆ. ಚಾಸಾ-12 ರವರು ಚಾಸಾ-8 ರವರ ಹೆಂಡತಿ ಇರುತ್ತಾಳೆ. ನನಗೆ ಚಾಸಾ-13 ರಿಂದ 16 ರವರ ಪರಿಚಯ ಇರುತ್ತದೆ. ಆರೋಪಿಗಳು ನಮ್ಮ ಸಂಬಂಧಿಕರು ಇರುತ್ತಾರೆ. 1 ನೇ ಆರೋಪಿಯ ತಂದೆಯಾದ ಪರ್ವತಗೌಡ ನನಗೆ ಚಿಕ್ಕಪ್ಪನಾಗಬೇಕು.

2. ನಮಗೂ ಮತ್ತು ಸದರಿ ಪರ್ವತಗೌಡನಿಗೂ ಆಸ್ತಿಗೆ ಸಂಬಂಧಿಸಿದಂತೆ ಜಗಳ ಇತ್ತು. ಈಗ ಸುಮಾರು ಮೂರು ವರ್ಷಗಳ ಹಿಂದೆ, ಒಂದು ದಿನ ಆರೋಪಿಗಳ ತಾಡಪತ್ರಿಯನ್ನು ನಮ್ಮ ರಾಶಿಯ ಮೇಲೆ ಹೊದಿಸಿದ್ದೆವು. ಆ ಕಾರಣಕ್ಕೆ ನಮಗೂ ಹಾಗೂ ಆರೋಪಿಗಳಿಗೂ ಜಗಳ ಆಗಿರುತ್ತದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸದರಿ ಪರ್ವತಗೌಡ, 1 ಮತ್ತು 3 ನೇ ಅರೆಊಪಿಗಳು ಹಾಗೂ ಇನ್ನಿತರರ ವಿರುದ್ಧ ಪೋಲೀಸರಿಗೆ ದೂರನ್ನು ಕೊಟ್ಟಿದ್ದೆವು.

3. ಸದರಿ ದೂರನ್ನು ಕೊಟ್ಟ ಮಾರನೇ ದಿನ, ನಾನು, ಪ್ರಾಸಾ-2, ಚಾಸಾ-7 ಮತ್ತು 8 ರವರು ಸೇರಿ ಚಾಸಾ-8 ರವರ ಮನೆಯ ಮುಂದೆ ನಿಂತುಕೊಂಡಿದ್ದಾಗ, ಮದ್ಯಾಹ್ನ 02.00 ಗಂಟೆ ಸುಮಾರಿಗೆ ಅಲ್ಲಿಗೆ ಎಲ್ಲಾ ಆರೋಪಿಗಳು ಕೈಗಳಲ್ಲಿ ಮಚ್ಚು, ಸೋಡಾ ಬಾಟಲಿ, ಬಡಿಗೆ, ಕಲ್ಲುಗಳನ್ನು

ಹಿಡಿದುಕೊಂಡು ಬಂದು, ನಮಗೆ ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ ಮತ್ತು ಅವರು ನಮಗೆ ಹಡಸಿ



ಮಕ್ಕಳೆ, ಬೋಸಡಿ ಮಕ್ಕಳೆ ಎಂದು ಬೈದಿರುತ್ತಾರೆ ಹಾಗೂ ನಮಗೆ ಹೊಡೆಯುವುದು, ಬಡಿಯುವುದು ಮಾಡಿರುತ್ತಾರೆ. ಪ್ರಾಸಾ-2 ರವರಿಗೆ, 1 ನೇ ಆರೋಪಿಯು ಮಚ್ಚಿನಿಂದ ಅವರ ತಲೆಗೆ ಹೊಡೆದಿರುತ್ತಾನೆ. ಮೂರನೆ ಅರೋಪಿಯು ಸೋಡಾ ಬಾಟಲಿಯಿಂದ ಚಾಸಾ-7 ರವರ ತಲೆಗೆ ಹೊಡೆದಿರುತ್ತಾನೆ. 4 ನೇ ಆರೋಪಿಯು ಬಡಿಗೆಯಿಂದ ನನಗೆ, ಪ್ರಾಸಾ-2, ಚಾಸಾ-7 ಮತ್ತು 8 ರವರಿಗೆ ಹೊಡೆದಿರುತ್ತಾನೆ. 7 ನೇ ಆರೋಪಿಯು ಕಲ್ಲಿನಿಂದ ನನಗೆ ಹೊಡೆದಿರುತ್ತಾನೆ. 1 ನೇ ಆರೋಪಿಯು ಬೈಕನ್ನು ನನ್ನ ಮೈಮೇಲೆ ಹಾಯಿಸಿಕೊಂಡು ಹೋಗಿರುತ್ತಾನೆ. ಜಗಳವನ್ನು ಚಾಸಾ-13 ರಿಂದ 16 ರವರು ಬಿಡಿಸಿರುತ್ತಾರೆ.

4. ಪ್ರಾಸಾ-2 ಮತ್ತು ಚಾಸಾ-7 ರವರಿಗೆ ಹೊಡೆದಿದ್ದರಿಂದಾಗಿ ಅವರ ತಲೆಗೆ ರಕ್ತಗಾಯಗಳಾಗಿದ್ದವು. ನಂತರ ನಾವು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ. ಮಾರನೇ ದಿನ ಪ್ರಾಸಾ-2 ಮತ್ತು ಚಾಸಾ-7 ರವರು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಹೋಗಿರುತ್ತಾರೆ. ಘಟನೆ ಬಗ್ಗೆ ಪ್ರಾಸಾ-2 ರವರು ದೂರನ್ನು ಕೊಟ್ಟಿರುತ್ತಾರೆ.

5. ಪೋಲೀಸರು ಘಟನೆ ಬಗ್ಗೆ ನನ್ನನ್ನು ವಿಚಾರಿಸಿರುತ್ತಾರೆ. ಪ್ರಾಸಾ-2 ರವರಿಗೆ ಹೊಡೆಯಲು ಉಪಯೋಗಿಸಿದ ಮಚ್ಚನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿರುತ್ತದೆ. ಹಾಗೆಯೇ ಹೊಡೆಯಲು ಉಪಯೋಗಿಸಿದ ಬಡಿಗೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿರುತ್ತದೆ. ಹಾಗೆಯೇ ಹೊಡೆಯಲು ಉಪಯೋಗಿಸಿದ ಸೋಡಾ ಬಾಟಲಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ. ಸೋಡಾ ಬಾಟಲಿಯ ಚೂರುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿರುತ್ತದೆ. ಹಾಗೆಯೇ ಹೊಡೆಯಲು ಉಪಯೋಗಿಸಿದ ಕಲ್ಲುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

6. 1 ನೇ ಆರೋಪಿಯು ನನ್ನ ಮೈಮೇಲೆ ಹಾಯಿಸಿಕೊಂಡು ಹೋದ ಬೈಕು ನಿಪಿ-4 ಮತ್ತು 5 ಫೋಟೋದಲ್ಲಿ ಕಂಡುಬರುತ್ತದೆ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

**<u>ಪಾಟಿ ಸವಾಲುಃ ಪಿಪಿಯವರಿಂದಃ</u>**

7. ಮೂರನೆ ಆರೋಪಿಯು ಮು.ಮಾ.5 ರಿಂದ ನನಗೆ, ಚಾಸಾ-7 ರವರಿಗೆ ಮತ್ತು

ಪ್ರಾಸಾ-2 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ. 7 ನೇ ಆರೋಪಿಯು ಮು.ಮಾ.1



ರಿಂದ ಚಾಸಾ-7 ರವರಿಗೆ ಹೊಡೆದಿರುತ್ತಾನೆ ಎಂದರೆ ಸರಿ. 13 ನೇ ಆರೋಪಿಯು ಮು.ಮಾ.1 ರಿಂದ ನನಗೆ ಹೊಡೆದಿರುತ್ತಾಳೆ ಎಂದರೆ ಸರಿ. ಆಗ ಚಾಸಾ-9 ರಿಂದ 16 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಎಲ್ಲಾ 13 ಜನ ಆರೋಪಿಗಳು ನಮಗೆ ತೆಕ್ಕೆ ಬಿದ್ದು ಅವಾಚ್ಯ ಶಬ್ದಗಳಿಂದ ಬೈದಾಡಿ ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲುಃ ಶ್ರೀ ಜಿ.ಪಿ. ಕೋಳಿವಾಡ, ಆರೋಪಿತರ ಪರ ವಕೀಲರಿಂದಃ**

**(ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ, ರೂ.250/- ಗಳ ಖರ್ಚಿನ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ</u>

ಎಸ್‌ಸಿ ನಂ. 04/2021

ಸಿಡಬ್ಲ್ಯು: 3 / ಪಿಡಬ್ಲ್ಯು: 5

ದಿನಾಂಕಃ 28.07.2023

**<u>ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಈರಪ್ಪ ಚವಡಿ |
| ತಂದೆ /ಗಂಡನ ಹೆಸರು | : | ಷಣ್ಮುಕಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಪೇಟಾಲೂರು ಗ್ರಾಮ |

## <u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ</u>

1. ಈಗ ತೋರಿಸಿದ ಗುನ್ನಾ ಜಾಗೆ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.**

2. ಈಗ ಸುಮಾರು ಮೂರು ವರ್ಷಗಳ ಹಿಂದೆ, ಅತ್ತಿಕಟ್ಟಿ ಗ್ರಾಮದ ಪಾಟೀಲ ಎಂಬುವವರ ಮನೆಯ ಮುಂದೆ ಪೋಲೀಸರು ನಿಪಿ-1 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ. ಆದರೆ ಎಷ್ಟು ಗಂಟೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಹೇಳಲು ಆಗುವುದಿಲ್ಲ. ಪೋಲೀಸರು ಸ್ಥಳದಿಂದ ಏನನ್ನು ತೆಗೆದುಕೊಂಡು ಹೋದರು ಎಂದು ನಾನು ಗಮನಿಸಿರುವುದಿಲ್ಲ. ಆದರೆ ಆಗ ನಿಪಿ-2 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ. ನಿಪಿ-2 ರಲ್ಲಿ ನನ್ನ ಭಾವಚಿತ್ರ ಇರುತ್ತದೆ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

## <u>ಪಾಟಿ ಸವಾಲುಃ ಪಿಪಿಯವರಿಂದಃ</u>

3. ದಿಃ ದಿಃ 07.03.2020 ರಂದು ಪೋಲೀಸರು ಮುಂಜಾನೆ 10.00 ರಿಂದ 11.00

ಗಂಟೆಯ ವರೆಗೆ ಚಾಸಾ-8 ರವರ ಮನೆಯ ಮುಂದೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸ್ಥಳವನ್ನು ಚಾಸಾ-9 ರವರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅವರ ಹೆಸರು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಆಗ ಪೋಲೀಸರು ಈಗ ತೋರಿಸಿದ ಮು.ಮಾ. 1 ರಿಂದ 5 ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲುಃ ಶ್ರೀ ಜಿ.ಪಿ. ಕೋಳಿವಾಡ, ಆರೋಪಿತರ ಪರ ವಕೀಲರಿಂದಃ**

**(ವಕೀಲರು ಪಾಟಿ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**